# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **57(08)** |
| **ಮಾನ್ಯ ಸದಸ್ಯರ ಹೆಸರು** | : | **ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)** |
| **ಉತ್ತರಿಸುವ ದಿನಾಂಕ** | : | **04.07.2023** |
| **ಉತ್ತರಿಸುವ ಸಚಿವರು** | : | **ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬಳ್ಳಾರಿ ಜಿಲ್ಲೆಯ ಬೇವಿನಹಳ್ಳಿ, ಕಕ್ಕಬೇವಿನಹಳ್ಳಿ, ಅಮರಾಪುರ, ಟಿ.ಬೂದಿಹಾಳ್, ಚಾಗನೂರು ಗ್ರಾಮಗಳ ರೈತರು ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಉದ್ಯೋಗ ಕೊಡಿ ಇಲ್ಲವೇ ಭೂಮಿ ವಾಪಸ್ ನೀಡಿ ಎಂದು ಪ್ರತಿಭಟನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹೌದಾದಲ್ಲಿ ಇದಕ್ಕೆ ಕಾರಣವೇನು; (ವಿವರ ನೀಡುವುದು). | ರೈತರು ಪ್ರತಿಭಟನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಬೇವಿನಹಳ್ಳಿ, ಕಕ್ಕಬೇವಿನಹಳ್ಳಿ, ಅಮರಾಪುರ, ಚಾಗನೂರು, ಟಿ. ಬೂದಿಹಾಳ ಗ್ರಾಮಗಳಲ್ಲಿ ಜಮೀನನ್ನು ಭೂಸ್ವಾಧೀನಪಡಿಸಿ M/s. Ballari Steels & Alloys Ltd., ಇವರ ಕಂಪನಿಗೆ ಹಂಚಿಕೆಯಾಗಿದ್ದು, ಸದರಿ ಕಂಪನಿ ಸ್ಥಗಿತವಾಗಿ ಕಂಪನಿ ಮುಚ್ಚಿರುತ್ತದೆ. ಭೂಮಾಲೀಕರಿಗೆ ಉದ್ಯೋಗ ನಷ್ಟವಾಗಿರುವುದು ಪ್ರತಿಭಟನೆಗೆ ಮೂಲ ಕಾರಣವಾಗಿರುತ್ತದೆ. |
| ಆ) | ಕೆಐಎಡಿಬಿ ವತಿಯಿಂದ ಈ ಗ್ರಾಮಗಳಲ್ಲಿ ಕೃಷಿ ಭೂಮಿಯನ್ನು ಯಾವ ವರ್ಷದಲ್ಲಿ, ಯಾವ ಉದ್ದೇಶಕ್ಕೆ ವಶಪಡಿಸಿಕೊಳ್ಳಲಾಗಿದೆ; ಈ ಭೂಮಿಯನ್ನು ಯಾರಿಗೆ ಮತ್ತು ಯಾವ ಉದ್ದೇಶಕ್ಕಾಗಿ ನೀಡಲಾಗಿದೆ. | 1) M/s. Ballari Steels & Alloys Ltd., ಇವರಿಗೆ "Mfg. of Pig Iron & Steel Rolled Product" ಯೋಜನೆಗಾಗಿ ಕಕ್ಕಬೇವಿನಹಳ್ಳಿ, ಅಮರಾಪುರ, ತೆಗ್ಗಿನಬೂದಿಹಾಳ, ಚಾಗನೂರು ಮತ್ತು ಬೇವಿನಹಳ್ಳಿ ಗ್ರಾಮಗಳಲ್ಲಿ ಅನುಕ್ರಮವಾಗಿ ಈ ಕೆಳಕಂಡಂತೆ ಒಟ್ಟು 993.35 ಎಕರೆ ವಿಸ್ತೀರ್ಣ ಜಮೀನನ್ನು ಏಕಘಟಕ ಸಂಕೀರ್ಣ ಯೋಜನೆಯಡಿ ಭೂಸ್ವಾಧೀನಪಡಿಸಿ ಹಂಚಿಕೆ ಮಾಡಲಾಗಿರುತ್ತದೆ.<br><br>**ಹಂಚಿಕೆ ದಿನಾಂಕ** \| **ಗ್ರಾಮದ ಹೆಸರು** \| **ವಿಸ್ತೀರ್ಣ (ಎಕರೆ)**<br>28.01.1997 \| ಕಕ್ಕಬೇವಿನಹಳ್ಳಿ, ಅಮರಾಪುರ ತೆಗ್ಗಿನಬೂದಿಹಾಳ \| 700.00<br>19.04.1997 \| ಅಮರಾಪುರ & ತೆಗ್ಗಿನಬೂದಿಹಾಳ \| 28.45 |

| | | |
|---|---|---|
| 07.08.1997 | ಕಕ್ಕಬೇವಿನಹಳ್ಳಿ, ಅಮರಾಪುರ ತೆಗ್ಗಿನಬೂದಿಹಾಳ | 17.90 |
| 23.10.2001 | ಕಕ್ಕಬೇವಿನಹಳ್ಳಿ, ಅಮರಾಪುರ ತೆಗ್ಗಿನಬೂದಿಹಾಳ, ಚಾಗನೂರು & ಬೇವಿನಹಳ್ಳಿ | 247.00 |
| | **ಒಟ್ಟು** | **993.35** |

ನಂತರದಲ್ಲಿ, M/s.Ballari Steels & Alloys Ltd., ಕಂಪನಿಯು Liquidationಗೆ ಒಳಪಟ್ಟಿದ್ದು, ಮೆ: ಐಎಫ್ ಸಿಐ ಲಿ., ಸಂಸ್ಥೆಯು SARFAESI Act, 2002 ರಡಿಯಲ್ಲಿ ಕಕ್ಕಬೇವಿನಹಳ್ಳಿ, ಅಮರಾಪುರ, ತೆಗ್ಗಿನಬೂದಿಹಾಳ ಗ್ರಾಮಗಳಲ್ಲಿನ 700.00 ಎಕರೆ ವಿಸ್ತೀರ್ಣದ ಜಮೀನನ್ನು M/s. Sesa Goa Ltd., ಕಂಪನಿಗೆ ದಿನಾಂಕ:21.03.2011 ರಂದು ಮಾರಾಟ ಮಾಡಿರುತ್ತದೆ.

ಮಂಡಳಿಯು ದಿನಾಂಕ:13.10.2020 ರಂದು ಕಕ್ಕಬೇವಿನಹಳ್ಳಿ, ಅಮರಾಪುರ, ತೆಗ್ಗಿನಬೂದಿಹಾಳ ಗ್ರಾಮಗಳಲ್ಲಿನ 700.00 ಎಕರೆ ವಿಸ್ತೀರ್ಣದ ಜಮೀನನ್ನು "4 MTPA Integrated Steel Plant" ಯೋಜನೆಗಾಗಿ M/s. Vedanta Ltd., (formerly known as M/s. Sesa Sterlite Ltd.,/M/s. Sesa Goa Ltd.,) ಇವರಿಗೆ ವರ್ಗಾಯಿಸಿರುತ್ತದೆ.

2) M/s. Sree Rayalaseema Alkalies & Allied Chemicals Ltd., (M/s. TVG SRAAC Ltd.), ಇವರಿಗೆ Power project ಯೋಜನೆಗಾಗಿ ತೆಗ್ಗಿನಬೂದಿಹಾಳ ಮತ್ತು ಗೋಡೆಹಾಳ ಗ್ರಾಮಗಳಲ್ಲಿ ಒಟ್ಟು 49.92 ಎಕರೆ ವಿಸ್ತೀರ್ಣದ ಜಮೀನನ್ನು ಏಕಘಟಕ ಸಂಕೀರ್ಣ ಯೋಜನೆಯಡಿ 1999-2003ನೇ ಸಾಲುಗಳಲ್ಲಿ ಹಂಚಿಕೆ ಮಾಡಲಾಗಿರುತ್ತದೆ.

M/s. Sree Rayalaseema Alkalies & Allied Chemicals Ltd., (M/s. TVG SRAAC Ltd.), ಇವರಿಗೆ ಹಂಚಿಕೆ ಮಾಡಲಾದ ಜಮೀನಿನಲ್ಲಿ ನಿಯಮಾನುಸಾರ ಯೋಜನೆಯನ್ನು ಅನುಷ್ಠಾನಗೊಳಿಸಿದ್ದು, ಒಟ್ಟು 49.92 ಎಕರೆ ವಿಸ್ತೀರ್ಣದ ಜಮೀನಿನ ಪೈಕಿ 37.75 ಎಕರೆ ವಿಸ್ತೀರ್ಣ ಜಮೀನಿಗೆ ಈಗಾಗಲೇ ಶುದ್ಧಕ್ರಯ ಪತ್ರವನ್ನು ನೆರವೇರಿಸಲಾಗಿರುತ್ತದೆ.

| | | |
|---|---|---|
| | | ಉಳಿದಂತೆ, 12.17 ಎಕರೆ ವಿಸ್ತೀರ್ಣದ ಜಮೀನಿನ ಪೈಕಿ ಭಾಗಶಃ ಭೂಮಾಲೀಕರು ಹೆಚ್ಚುವರಿ ಪರಿಹಾರ ಧನ ಕೋರಿ ವಿವಿಧ ನ್ಯಾಯಾಲಯಗಳಲ್ಲಿ LAC ಪ್ರಕರಣಗಳನ್ನು ದಾಖಲು ಮಾಡಿದ್ದು, ಸದರಿ ಪ್ರಕರಣಗಳು ಇತ್ಯರ್ಥಕ್ಕೆ ಬಾಕಿ ಇರುತ್ತವೆ. |
| ಇ) | ಸದರಿ ಭೂಮಿಯನ್ನು ಯಾರಿಗೂ ನೀಡದಿದ್ದ ಪಕ್ಷದಲ್ಲಿ ಇಷ್ಟು ವರ್ಷಗಳ ಕಾಲ ಯಾವ ಉಪಯೋಗಕ್ಕೂ ಅದನ್ನು ಬಳಕೆ ಮಾಡದೇ, ರೈತರಿಗೂ ನೀಡದೇ ಇಟ್ಟುಕೊಳ್ಳಲು ಕಾರಣವೇನು; ಇದು ಸರ್ಕಾರದ ಲೋಪವಲ್ಲವೇ; (ವಿವರ ನೀಡುವುದು) | M/s. Ballari Steels & Alloys Ltd., ಕಂಪನಿಯವರಿಗೆ ಹಂಚಿಕೆಯಾಗಿದ್ದು ಜಮೀನು Liquidation ಆಗಿ ತದನಂತರ ಸದರಿ ಜಮೀನಿನ ಗುತ್ತಿಗೆ ಕರಾರಿನ ಹಕ್ಕನ್ನು M/s. Vedanta Ltd., (formerly known as M/s. Sesa Sterlite Ltd., M/s. Sesa Goa Ltd.,) ರವರು ವರ್ಗಾವಣೆ ಪಡೆದಿರುವುದರಿಂದ ಸದರಿ ಜಮೀನಿನಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು ಕಾಲಾವಕಾಶವಿರುತ್ತದೆ.<br><br>M/s. Sree Rayalaseema Alkalies & Allied Chemicals Ltd., (M/s.TVG SRAAC Ltd.), ಇವರಿಗೆ ಹಂಚಿಕೆ ಮಾಡಲಾದ ಜಮೀನಿನ ಪೈಕಿ ತಕರಾರು ರಹಿತ ಜಮೀನಿನಲ್ಲಿ ಕಂಪನಿಯು ಈಗಾಗಲೇ ಯೋಜನೆಯನ್ನು ಅನುಷ್ಠಾನಗೊಳಿಸಿರುವುದರಿಂದ ಶುದ್ಧಕ್ರಯ ನೆರವೇರಿಸಲಾಗಿದೆ.<br><br>ಸದರಿ ಜಮೀನುಗಳಿಗೆ ನಿಗಧಿಪಡಿಸಿರುವ ಭೂ ಪರಿಹಾರವನ್ನು ಭೂಮಾಲೀಕರಿಗೆ ಪಾವತಿಸಲಾಗಿದ್ದು, ಮತ್ತು ಪಡೆಯದವರ ಭೂಪರಿಹಾರವನ್ನು ಅವಾರ್ಡ ರಚಿಸಿ ನ್ಯಾಯಾಲಯಗಳಲ್ಲಿ ನಿಯಮಾನುಸಾರ ಠೇವಣಿ ಮಾಡಿದ್ದು, ಜಮೀನುಗಳನ್ನು ಮಂಡಳಿಯ ವಶಕ್ಕೆ ಪಡೆಯಲಾಗಿದೆ.<br><br>ಮೇಲೆ ತಿಳಿಸಿದ 2 ಕಂಪನಿಗಳಿಗೆ ಈಗಾಗಲೇ ಜಮೀನು ಹಂಚಿಕೆ ಮಾಡಲಾಗಿದ್ದು, ರೈತರಿಗೆ ಮರಳಿ ಜಮೀನನ್ನು ನೀಡಲು ಕೆ.ಐ.ಎ.ಡಿ. ಕಾಯ್ದೆಯಡಿಯಲ್ಲಿ ಅವಕಾಶವಿರುವುದಿಲ್ಲ. |
| ಈ) | ವಶಪಡಿಸಿಕೊಂಡಿರುವ ಭೂಮಿಯನ್ನು ಉಪಯೋಗಪಡಿಸಿಕೊಳ್ಳದಿರುವ ಕಾರಣ ಅದನ್ನು ರೈತರಿಗೆ ವಾಪಸ್ ನೀಡಲು ಸರ್ಕಾರ ಮುಂದಾಗುವುದೇ? (ಮಾಹಿತಿ ನೀಡುವುದು) | |

**ಸಂಖ್ಯೆ: ಸಿಐ 118 ಐಎಪಿ 2023**

**(ಎಂ.ಬಿ. ಪಾಟೀಲ)**
**ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.**